# ಪತ್ರಿಕಾ ಪ್ರಕಟಣೆ

## ತೊಗರಿ, ತೊಗರಿ ಬೆಳೆ, ಕಳವು ಮಾಡುತ್ತಿದ್ದ ಆರೋಪಿತನ ಬಂಧನ.

(ವಿಶ್ವವಿದ್ಯಾಲಯ ಪೊಲೀಸ ಠಾಣೆಯ ಪೊಲೀಸರು 05 ತೊಗರಿ, ತೊಗರಿ ಬೆಳೆ, ಕಡಲೆ ಕಳ್ಳತನ ಪ್ರಕರಣಗಳಲ್ಲಿ 65 ತೊಗರಿ, ತೊಗರಿ ಬೆಳೆಗಳ, ಕಡಲೆ ಚೀಲಗಳು, ಅ.ಕಿ–1,63,000./–ರೂ ಕಿಮ್ಮತ್ತಿನವುಗಳನ್ನು ವಶಪಡಿಸಿಕೊಂಡಿದ್ದು)

ಇಂದು ದಿನಾಂಕ 16.07.2021 ರಂದು ಕಲಬುಗರಿ ನಗರದ ನಂದೂರ ಇಂಡಸ್ಟ್ರಿಯಲ್ ಏರಿಯಾದಲ್ಲಿ ಸಂಶಯಾಸ್ಪದವಾಗಿ ಬುಲೆರೋ ಪಿಕಪ್ ನಂ. ಕೆಎ 32 ಡಿ 5321 ನೇದ್ದನ್ನು ಚಲಾಯಿಸುತ್ತಾ ತಿರುಗಾಡುತ್ತಿದ್ದ ಬಗ್ಗೆ ಮಾಹಿತಿ ಮೇರೆಗೆ ಮಾನ್ಯ ಶ್ರೀ ವೈ.ಎಸ್.ರವಿಕುಮಾರ ಪೊಲೀಸ್ ಆಯುಕ್ತರು, ಕಲಬುರಗಿ ನಗರ ರವರ ಮತ್ತು ಮಾನ್ಯ ಶ್ರೀ ಅದ್ದೂರು ಶ್ರೀನಿವಾಸಲು ಐ.ಪಿ.ಎಸ್, ಉಪ ಪೊಲೀಸ ಆಯುಕ್ತರು (ಕಾ.ಸು.) ಕಲಬುರಗಿ ನಗರ, ಶ್ರೀ ಶ್ರೀಕಾಂತ ಕಟ್ಟಿಮನಿ ಕೆ.ಎಸ್.ಪಿ.ಎಸ್ ಉಪ ಪೊಲೀಸ ಆಯುಕ್ತರು (ಅ.ಸಂ) ಕಲಬುರಗಿ ನಗರ ರವರ ಮಾರ್ಗದರ್ಶನದಲ್ಲಿ ಮಾನ್ಯ ಎ.ಸಿ.ಪಿ. ಶ್ರೀ ಜೇ.ಹೆಚ್.ಇನಾಮದಾರ (ಸಿ) ಉಪವಿಭಾಗ ಕಲಬುರಗಿ ನಗರ ಇವರ ನೇತೃತ್ವದಲ್ಲಿ ಶ್ರೀ ಶಿವಾನಂದ ಘಾಣೆಗೇರ ಪಿ.ಐ. ವಿಶ್ವ ವಿದ್ಯಾಲಯ ಪೊಲೀಸ ಠಾಣೆ ಕಲಬುರಗಿ, ಸಂಜುಕುಮಾರ ಹೆಚ್.ಸಿ 447, ರಾಜು ಟಕಾಳೆ ಹೆಚ್.ಸಿ–279, ಶ್ರೀ ಅರವಿಂದ ಸಿಪಿಸಿ 955, ಸುಲ್ತಾನ ಸಿಪಿಸಿ 958, ಶಶಿಕಾಂತ ಸಿಪಿಸಿ 59, ಪ್ರೀತಮ್ ಸಿಪಿಸಿ 145, ಈರಣ್ಣಾ ಸಿಪಿಸಿ 637, ಸುರೇಶ ಸಿಪಿಸಿ 788 ರವರಿಂದ ಕೂಡಿದ ತಂಡ ನಂದೂರ ಇಂಡಸ್ಟ್ರಿಯಲ್ ಏರಿಯಾದಲ್ಲಿ ಹೋಗುತ್ತಿರುವಾಗ ಒಬ್ಬನು ಬುಲೆರೋ ಪಿಕಪ್ ನಂ. ಕೆಎ 32 ಡಿ 5321 ನೇದ್ದನ್ನು ಚಲಾಯಿಸುತ್ತಾ ಸಂಶಯಾಸ್ಪದವಾಗಿ ತಿರುಗಾಡುತ್ತಿರುವ ವ್ಯಕ್ತಿಯನ್ನು ಕಂಡು ಪೊಲೀಸರು ಅವನನ್ನು ವಿಚಾರಣೆ ಮಾಡಬೇಕೆನ್ನುವಷ್ಟರಲ್ಲಿ ಅವನು ಪೊಲೀಸರನ್ನು ಕಂಡು ಓಡಿ ಹೋಗುತ್ತಿರುವಾಗ ಪೊಲೀಸರು ಅವನನ್ನು ಬೆನ್ನು ಹತ್ತಿ ಹಿಡಿದು ಠಾಣೆಗೆ ಕರೆತಂದು ಕೂಲಂಕೂಶವಾಗಿ ವಿಚಾರಣೆ ಮಾಡಲಾಗಿ ಅವನ ಹೆಸರು ರಮೇಶ ತಂದೆ ನಾಗಪ್ಪಾ ನಾಟಿಕಾರ, ವಯ: 19 ವರ್ಷ, ಉ: ಚಾಲಕ, ಜಾತಿ: ಕಬ್ಬಲಿಗ, ಸಾ: ಹೇರೂರ (ಕೆ) ತಾ:ಚಿತ್ತಾಪೂರ. ಈ: ಕಲಬುರಗಿ ಅಂತಾ ತಿಳಿಸಿ, ಅವನು ಕಲಬುರಗಿ ಹೊರ ವಲಯದಲ್ಲಿರುವ ವೇರ್ ಹೌಸ್ ಗಳಲ್ಲಿ, ಮನೆಯ ಹೊರಗಡೆ ಇಟ್ಟಿರುವ ತೊಗರಿ, ತೊಗರಿ ಬೆಳೆಗಳ, ಕಡಲೆ ಚೀಲಗಳನ್ನು ಕಳ್ಳತನ ಮಾಡಿರುವ ಬಗ್ಗೆ ತನ್ನ ತಪ್ಪನ್ನು ಒಪ್ಪಿಕೊಂಡು ಅವನು ಕಳ್ಳತನ ಮಾಡಿದ್ದರಿಂದ ಒಟ್ಟು 05 ಪ್ರಕರಣಗಳಲ್ಲಿ ಸಿಕ್ಕಿರುವ ಒಟ್ಟು 65 ತೊಗರಿ, ತೊಗರಿ ಬೆಳೆಗಳ ಚೀಲಗಳು, ಅ.ಕಿ–1,63,000./–ರೂ ಮೌಲ್ಯದವುಗಳನ್ನು ಆರೋಪಿಯು ಹಾಜರು ಪಡಿಸಿದ್ದು ಅದನ್ನು ಪೊಲೀಸ್ ಅಧಿಕಾರಿಗಳು ತನಿಖೆ ಕಾಲಕ್ಕೆ ವಶಪಡಿಸಿಕೊಂಡಿದ್ದು ಇರುತ್ತದೆ.

ಸದರಿ ಆರೋಪಿತನನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡುವಲ್ಲಿ ಯಶ್ವಸಿಯಾದ ಕಲಬುರಗಿ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ಅಧಿಕಾರಿ ಮತ್ತು ಸಿಬ್ಬಂದಿಯವರ ಕಾರ್ಯಕ್ಕೆ ಮಾನ್ಯ ಪೊಲೀಸ್ ಆಯುಕ್ತರು ಕಲಬುರಗಿ ನಗರ ರವರು ಮತ್ತು ಮಾನ್ಯ ಡಿ.ಸಿ.ಪಿ. (ಕಾ.ಸು.), ಮಾನ್ಯ ಡಿ.ಸಿ.ಪಿ. (ಅ.ಸಂ), ಕಲಬುರಗಿ ನಗರ ರವರು ಮೆಚ್ಚುಗೆ ವ್ಯಕ್ತಪಡಿಸಿದ್ದು ಇರುತ್ತದೆ.

Scanned with CamScanner